## ಶ್ರೀವಿಜಯದಾಸರಿಂದ ರಚಿತವಾದ ಶ್ರೀಪ್ರಾಣದೇವರ ಚರಣ ಮಹಿಮಾ ಸುಳಾದಿ

### ಶ್ರೀವಾದಿರಾಜ ತೀರ್ಥರಿಂದ ಪ್ರತಿಷ್ಠಾಪಿತವಾದ
### ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಪ್ರತೀಕ - ಪಾಜಕ ಕ್ಷೇತ್ರ



ಶ್ರೀನಾರಾಯಣನಿಗೆ ಮುಖ್ಯ।ಪ್ರತಿಬಿಂಬ ಎಂತೆಂದೆನಲು ಪಾಲಿಸುವದೀ ಚರಣ।
ಸತತ ಈತನೆ ಮುಖ್ಯ ಗುರುವೆಂದು ತಿಳಿದು ಅನವ।ರತದಲ್ಲಿ ಇದ್ದವಗೆ ವಜ್ರಪಂಜರ ಈ ಚರಣ।
5ನೇ ಆದಿತಾಳ - ಶ್ರೀವಿಜಯದಾಸರು

ಶ್ರೀವಿಜಯದಾಸರು ಈ ಪ್ರಾಣದೇವರ ಚರಣ ಮಹಿಮಾ ಸುಳಾದಿಯಲ್ಲಿ ಶ್ರೀವಾಯುದೇವರ ಮೂಲಾವತಾರದೊಂದಿಗೆ ಅವರ ಹನುಮ, ಭೀಮ ಹಾಗೂ ಮಧ್ವಾವತಾರವನ್ನು ಸಹ ವರ್ಣಿಸಿದ್ದಾರೆ. ಈ ಸುಳಾದಿಯ ಮೊದಲನೇ ಧ್ರುವತಾಳದಲ್ಲಿ ವಾಯುದೇವರ ಮೂಲಾವತಾರದ ವರ್ಣನೆಯಿದೆ. 2ನೇ ಮಟ್ಟತಾಳದಲ್ಲಿ ವಾಯುದೇವರ ಅವತಾರತ್ರಯಗಳಲ್ಲಿ ಮೊದಲನೆಯದಾದ ಹನುಮಂತನ ಅವತಾರದ ವರ್ಣನೆಯಿದೆ. 3ನೇ ತ್ರಿವಿಡತಾಳದಲ್ಲಿ ಎರಡನೆಯದಾದ ಭೀಮಾವತಾರದ ವರ್ಣನೆಯಿದೆ. ಈ ಸುಳಾದಿಯ 4ನೇ ಅಟ್ಟತಾಳ ಹಾಗೂ 5ನೇ ಆದಿತಾಳದಲ್ಲಿ ಮೂರನೆಯದಾದ ಮಧ್ವಾವತಾರವನ್ನು ಸಂಗ್ರಹಿಸಲಾಗಿದೆ. ಈ ಸುಳಾದಿಯ ಜತೆಯಲ್ಲಿ ವಾಯುದೇವರ ಚರಣಸ್ಮರಣೆಯನ್ನು ಮನಃಪೂರ್ವಕವಾಗಿ ಮಾಡಿದರೆ - ಚಿತ್ತದಲ್ಲೀಚರಣ ಭಜಿಸಿದ ಜೀವಿಗೆ। ನಿತ್ಯಾಯು ಉತ್ಸಹ ವಿಜಯವಿಠ್ಠಲ ಕೊಡುವ॥ ಎಂದು ಹೇಳುತ್ತಾ ಗುರು ಭಕ್ತಿಯು ಹರಿಪ್ರೀತಿಗೆ ಕಾರಣವಾಗುತ್ತದೆ ಎಂದು ತಿಳಿಸಿ, ಹರಿಯನ್ನು ಪ್ರಾಣಪ್ರತೀಕದ ಮೂಲಕ ಹೊಂದಬೇಕೆಂಬ ಪ್ರಮೇಯವನ್ನು ತಿಳಿಸುತ್ತಿದ್ದಾರೆ ಶ್ರೀವಿಜಯದಾಸರು.

## ವಾಯುದೇವರ ಮೂಲಾವತಾರ ವರ್ಣನೆ

॥ ರಾಗ ನಾಟಿ ॥ ಧ್ರುವತಾಳ ॥ ಅಂದಿಗೆ ಪೊಂಗೆಜ್ಜೆ ಬಿರುದಿನ ಕಾಲ್ಪೆಂಡೆ।ಯಿಂದ ಝುಗಝುಗಸುವ ಅರುಣ ಕಾಂತಿಯ ಚರಣ। ಇಂದುವಿನ ಸೋಲಿಸುವ ಪ್ರಕಾಶ ಪೂರ್ಣಮಯ।ದಿಂದ ಬ್ರಹ್ಮಾಂಡವನ್ನು ಬೆಳಗುತಿಪ್ಪ ಚರಣ । ತಂದನ್ನ ತಾನ ಎಂದು ಕೈಯ್ಯಲಿ ಕಿನ್ನರಿಧರಿಸಿ। ಅಂದವಾಗಿ ಶ್ರೀಹರಿಯಮುಂದೆ ಕುಣಿವ ಚರಣ। ಇಂದು ಮೌಳಿ ಮುಖ್ಯ ಸುರರಾದ್ಯರಿಂದ ಆ।ನಂದವಾಗಿ ನಿತ್ಯ ಪೂಜೆಗೊಂಬ ಚರಣ। ಅಂದಿಗೆ ಪೊಂಗೆಜ್ಜೆಯನಿಟ್ಟ ಚರಣ। ಮಂದ ಮಾನವರಿಗೆ ಪ್ರೀತಿ ಬಡಿಸಿ ಸುಖ।ಸಿಂಧುವಿನೊಳಿಟ್ಟು ದಯ ಮಾಳ್ಪ ದೀ ಚರಣ। ಸಂದೇಹ ವಿಪರೀತ ಜ್ಞಾನ ಜೀವರಿಗೆ ನಿ।ರ್ಬಂಧನದೊಳು ಪೊಗಿಸಿ ಕಷ್ಟಪಡಿಸುವ ಚರಣ। ಮುಂದೆ ಬೊಮ್ಮನಾಗಿ ಸತ್ಯ ಲೋಕದಲ್ಲಿ ಮೃಗೇಂದ್ರನ ಗದ್ದುಗಿ ಮೇಲೆ ವಾಲಗಗೊಂಬುವ ಚರಣ। ಒಂದೊಂದು ರೂಪಗುಣಕ್ರಿಯಸಮೂಹಗಳು ಅ।ತೀಂದ್ರಿಯವಾಗಿ ಮನಕೆ ತೋರುವ ಶ್ರೀಚರಣ। ಸುಂದರಿ ಭಾರತಿದೇವಿ ಏಕಾಂತದಲಿ ನೋಡಿ। ಗಂಧಪರಿಮಳಪೂಸಿ ಅಪ್ಪಿ ಕೊಂಬುವ ಚರಣ। ತಂದೆ ತಾಯಿಗಳಂತೆ ತಪ್ಪ ದೆ ಅನುದಿನ। ಅಂದಂದ ಅಭಿಲಾಷೆ ಕೊಡುವ ಕಮನೀಯ ಚರಣ। ಅಂದಿಗಂದಿಗೆ ಸಮನಾಗಿ ಸಾಧ್ಯವಾಗಿ। ಒಂದೇ ಪ್ರಕಾರದಲ್ಲಿ ಭಕ್ತರಿಗೆ ವೊಲಿವ ಚರಣ। ಪೊಂದಿದವರಲ್ಲಿ ವಿಶ್ವಾಸ ಮಾಡುವ ಜನರ। ಬಂಧನ ಪರಿಹರಿಸಿ ಪಾಲಿಸುವದೀ ಚರಣ। ಇಂದು ಹೃತ್ಕಮಲಮಧ್ಯ ದಹರಾಕಾಶದಲ್ಲಿ ನಿಂದು ಪೂಜೆ ಮಾಡಲ್ಪಟ್ಟ ಮಂಗಳ ಚರಣ। ಕಂದರ್ಪಪಿತ ನಮ್ಮ ವಿಜಯವಿಠ್ಠಲಗೆ ಶರ।ಣೆಂದು ಬಾಗುವ ಸೂತ್ರಪ್ರಾಣನ ಪರಮಚರಣ ॥ 1 ॥

## 1. ಹನುಮದವತಾರ ವರ್ಣನೆ

॥ ಮಟ್ಟತಾಳ ॥ ಅಂಜನೆದೇವಿಯಲ್ಲಿ ಉದ್ಭವಿಸಿ ಬಂದು। ಕಂಜಸಖನೆಡಿಗೆ ಹಾರಿದದೀ ಚರಣ। ಕಂಜಮಿತ್ರನ ಸುತನ ಕರೆದು ಮನ್ನಿಸಿ ಅವನ। ಅಂಜಿಕೆಯನು ಬಿಡಿಸಿ ಎರಗಿಸಿಕೊಂಡ ಚರಣ। ಕಂಜನಾಭನ ಕಂಡು ಪರವಶದಲಿ ಹಾಹಾ। ರಂಜಿಸುತಲಿ ವೇಗ ಜಿಗಿದ್ಹಾರಿದ ಚರಣ। ಕುಂಜರನಾಥನ ಮಗನ ಮಹಾ ಗರ್ವ।ಭಂಜನೆ ಮಾಳ್ಪ ದಕೆ ನಡೆದಾಡಿದ ಚರಣ। ಮಂಜುಭಾಷಣ ರಾಮ ಪೇಳ್ದಕ್ಷಣ ಕಪಿ। ಪುಂಜರ ಒಡಗೊಂಡು ತೆರಳಿದದ್ದೀ ಚರಣ। ನಂಜ ಸವಿದ ಧೀರ ಗಿರಿಯಜಿಗಿದು ನೋಡಿ। ಅಂಜದೆ ಜಲನಿಧಿಯ ಲಂಘಿಸಿದ ಚರಣ। ಜಂಝಾನಿಳನಂತೆ ದೈತ್ಯಪಟ್ಟಣ ಪೊಕ್ಕು। ಕಂಜಮುಖಿಗೋಸುಗ ಸಂಚರಿಸಿದ ಚರಣ। ಗುಂಜಿ ತೂಕದಿನಿತು ಭಯವಿಲ್ಲದೆ ಪುರ ಧ।ನಂಜಯಗೆಡೆ ಉಣಿಸುತ ಓಡಾಡಿದ ಚರಣ। ವ್ಯಂಜಕ ತಾನಾಗಿ ಸ್ವಾಮಿಕಾರ್ಯದಲ್ಲಿ ಮೃ।ತ್ಯುಂಜಯ ಶಿಷ್ಯರನ ವರಿಸಿದ ಬಲು ಚರಣ। ಭುಂಜಿಪ ಎಡೆಗೊಂಡು ದೇವನಲ್ಲಿ ಇಡಲು । ಎಂಜಲವೈದೊಂದು ಮರವೇರಿದ ಚರಣ। ಅಂಜಲಿಪುಟ ಬಿಟ್ಟು ಬಿಂಕದಲಿ ಧ।ನಂಜಯನರಥಕ್ಕೆ ಬಂದೇರುವ ಚರಣ। ಕಿಂಜಲ್ಕವಾಸ ವಿಜಯವಿಠ್ಠಲನಂಘ್ರಿ। ಕಮಲ ಪೂಜಿಪ ಹನುಮನ ನಾನಾವರ್ಣವಾದ ಚರಣ ॥ 2 ॥

## 2.ಭೀಮಾವತಾರ ವರ್ಣನೆ

॥ ತ್ರಿವಿಡತಾಳ ॥ ಗಿರಿಯ ಮಧ್ಯದಿ ಜಿಗುಳಿ ವದ್ದಾಡಿದ ಚರಣ। ಗಿರಿಯ ಮಧ್ಯದಿ ದ್ವಿಜಗೂಳಿ ವದ್ದ ಚರಣ। ಮರದ ಮೇಲೆ ಇದ್ದವರ ಕೆಡಹಿದಾ ಚರಣ। ಸುರನದಿಯೊಳು ಬಿದ್ದ ಅಹಿಗಳ ಕುಟ್ಟಿದ ಚರಣ। ನಿರುತ ಪರಿಪರಿಯಿಂದ ನಲಿದಾಡಿದ ಚರಣ। ಅರಗಿನಮನೆ ಗೆದ್ದು ಬಂದು ರಾತ್ರೆ ಹಿಡಂಬನ। ವರಸಿ ಸತಿಯಳಿಂದ ಅರ್ಚನೆಗೊಂಡ ಚರಣ। ಪುರದೊಳು ಭಿಕ್ಷವ ಬೇಡುತ ತಿರುಗಿದ ಚರಣ। ದುರಳ ಬಕನ ವದ್ದ ದುಸ್ತರದಾ ಚರಣ। ಅರಸಿನ ಸಭೆಯಲ್ಲಿ ಹುಂಕರಿಸಿ। ಹರುಷದಲಿ ನೆನೆದು ದ್ರೌಪದಿ ಬಂದು ಕಂಡ ಚರಣ। ನರನಾಥ ರಾಜಸುಯಾಗವ ಮಾಡಲು ಪೋಗಿ। ಧರೆಯಲ್ಲಿ ತಿರುಗಿ ವಂದಿಸಿಕೊಂಡ ಚರಣ। ಪುರುಷಮೃಗನ ಕೈಯ ಪಿಡಿಸಿಕೊಂಡ ಚರಣ। ಸುರರೊಳು ಅರಿಕಾದಾ ಭೀಮನ ಚರಣ। ತೆರಳಿ ವನದಲ್ಲಿ ಕುಸುಮ ಘೋಷಯಾತ್ರೆ ಮತ್ಸ್ಯನ।ಪುರದಲ್ಲಿ ಮೆರೆದ

ಮಂದಾರ ಚರಣ। ಧುರದೊಳು ನಿಂದು ಬಲ್ಲಿದ ಅನ್ಯೋ।ನ್ಯರನ್ನು ನೆಲಕಿಕ್ಕಿ ದುರುಳ ಸೈನ್ಯವೆಲ್ಲ। ಪರಿಹರಿಸಿದ ಚರಣ ಅಪ್ರತಿಚರಣ। ತರುಣಿ ಪಾಂಚಾಲಿಯ ಎಳೆದ ಖಳನ ಭಂಗಿಸಿ। ಉರದ ಮೇಲೆ ನಿಂತು ಕುಣಿದಾಡಿದ ಚರಣ। ದುರ್ಯೋಧನನು ಬಂದು ತರುಬಲಾಕ್ಷಣಕೆ ಅವನ। ತರಿದು ಬಿಸಾಟಿ ಶಿರವ ಮೆಟ್ಟಿದ ಮಹಾ ಚರಣ। ಹರಿಗೆ ಸಮ್ಮೊಗವಾಗಿ ಅಟ್ಟಹಾಸದಲಿ ನಿಂ।ದಿರದೆ ನಿದಾನದಲಿ ನಾಟ್ಯವಾಡಿದ ಚರಣ। ಹರನ ಕಡಿಯಿಂದ ಹರಿಯ ಅಸ್ತ್ರ ಬರಲು। ಶಿರವ ಬಾಗದೆ ಧರಣಿಯ ಮೇಲೆ ಕುಣಿದ ಚರಣ। ವರವೃಕೋದರನ ಚರಣ ಶರಣ ಪಾಲಕ ಚರಣ। ಪರಮ ಪುರುಷ ಕೃಷ್ಣ ವಿಜಯವಿಠ್ಠಲರೇಯನ। ಶರಣರೊಳಧಿಕನಾದ ಬೀಮಸೇನನ ಚರಣ ಅಪ್ರತಿಚರಣ ॥ 3 ॥

## 3. ಶ್ರೀಮಧ್ವಾವತಾರ ವರ್ಣನೆ

॥ ಅಟ್ಟತಾಳ ॥ ವಿಪ್ರನ ಮನೆಯನ್ನು ಪಾವನ ಮಾಡಿದ ಚರಣ। ಸ್ವಪ್ರಕಾಶದಿಂದ ಪೊಳೆವದೀ ಶಿರಿಚರಣ। ಸುಪ್ರೇಮದಿಂದ ಜನನಿಯು ಕರೆಯಲು। ಕ್ಷಿಪ್ರತನದಲ್ಲಿ ಧುಮುಕಿದ ಚರಣ। ಸರ್ಪನ ವರಸಿದ ಚರಣ ದಿವ್ಯ ಚರಣ। ತಪ್ಪ ದೆ ಹೆಬ್ಬುಲಿ ಕೂಡ ಚರಿಸಿದ ಚರಣ। ಅಪ್ಪ ನ ಮಾತಿಗೆ ಯತಿಯಾಗಿ ಮುನಿಯಾಗಿ ಲೇಸಾಗಿ। ಒಪ್ಪ ದಿಂದ ತೀರ್ಥಯಾತ್ರೆ ಮಾಡಿದ ಚರಣ। ಗುಪ್ತ ಮಾರ್ಗದಿಂದ ನದಿಯ ದಾಟಿದ ಚರಣ। ತೃಪ್ತಿಯ ಕೊಡುವದು ನಮಗೆ ಇದೇ ಚರಣ। ದರ್ಪವುಳ್ಳ ಮಹಾಮಾಯಿ ಅರಣ್ಯಕ್ಕೆ। ಚಪ್ಪ ಗೊಡಲಿಯಾಗಿ ಇರುತಿಪ್ಪ ದೀ ಚರಣ। ಪುಷ್ಪ ದೋಪಾದೇಲಿ ಬದರಿಕಾಶ್ರಮದಲ್ಲಿ। ಸುಪ್ರೇಮದಿಂದಲಿ ಪೂಜೆಗೊಂಬ ಚರಣ। ತುಪ್ಪ ಸಕ್ಕರಿಪಾಲು ಉಣಿಸುವದೀ ಚರಣ। ಕಪ್ಪು ಕಲುಷವಿಲ್ಲ ರಾತ್ರಿಲಿ ಓದುವ। ಅಪ್ಪಾ ರ ಜನಕ್ಕೆ ಬೆಳಕು ಮಾಡಿದ ಚರಣ। ಮುಪ್ಪು ಇಲ್ಲದೇ ಜೀವನ ಸಾಧನಗಳ। ದರ್ಪಣದಂತೆ ತೋರಿಕೊಡುವದೀ ಚರಣ। ಬಪ್ಪ ಪೋಗುವ ಶಕುತಿ ಏನು ಪೇಳಲಿ ಕಂ।ದರ್ಪ ಎಣಿಸಲಾಗಿ ನೆಲೆದೋರದಾ ಚರಣ ಕಂ।ದರ್ಪನಯ್ಯನ ನೆನೆಸಲಾಗಿ ನೆಲೆದೋರುವದೀ ಚರಣ। ಕಪ್ಪು ಗೊರಳನಿಂದ ವಂದಿತ ಚರಣ। ಸಪ್ತಭುವನೇಶ ವಿಜಯವಿಠ್ಠಲಗೆ। ಆಪ್ತವಾದ ಆನಂದತೀರ್ಥರ ಚರಣ ॥ 4 ॥

॥ ಆದಿತಾಳ ॥ ಚತುರಯುಗದೊಳು ಮಹಿಮೆ ತೋರಿದ ಚರಣ। ಚತುರವಿಂಶತಿ ವ್ಯಾಪಿಸಿ ಇದ್ದ ಚರಣ। ಸ್ತುತಿಸಿದ ಜನರಿಗೆ ಭೇದಜ್ಞಾನ ಕೊಟ್ಟು। ಗತಿಗೆ ಸತ್ಪಥಕ್ಕೆ ತೋರುವ ಶ್ರೀಚರಣ। ಪತಿತನಾದರೆ ಒಂದೇ ಸಾರಿ ಶ್ರೀನಾರಾಯಣನಿಗೆ ಮುಖ್ಯ।ಪ್ರತಿಬಿಂಬ ಎಂತೆಂದೆನಲು ಪಾಲಿಸುವದೀ ಚರಣ। ಸತತ ಈತನೆ ಮುಖ್ಯ ಗುರುವೆಂದು ತಿಳಿದು ಅನವ।ರತದಲ್ಲಿ ಇದ್ದವಗೆ ವಜ್ರಪಂಜರ ಈ ಚರಣ। ಕ್ಷಿತಿಯೊಳಗೆ ಎನಗಿದು ಸುರಧೇನು ಈ ಚರಣ। ಪ್ರತಿಗಾಣೆನೊ ಎನಗಿದೆ ಇದೇ ಸುರತರು ಚರಣ। ಮತ್ತೊಂದೆನಗಿಲ್ಲ ಇದೇ ಚಿಂತಾಮಣಿ ಚರಣ। ಮಿತಿಯಿಲ್ಲದ ಜನ್ಮಬರಲಿ ಬಂದಿರಲಿ ಶಾ।ಶ್ವತವಹುದೋ ಲೇಸ ಮಾತ್ರಾನುಮಾನವಿಲ್ಲ ವಿ।ಹಿತವಾಗಿ ನಂಬಿಹೆ ಈ ಚರಣ ಈ ಚರಣ। ಅತಿಶಯದಿ ಜನ್ಮಜನ್ಮಾಂತರದಿಂದ ನಂಬಿದ್ದದೀ ಚರಣ। ಆರ್ತಿಯಿಂದಲಿ ತಂದೆತಾಯಿಯಂತೆ ಪೊರೆದು ಸ।ದ್ಗತಿಯನಿತ್ತು ನಿಜಸುಖ ಉಣಿಸುವದೀ ಚರಣ। ಆರ್ತ ಜನರ ಸಂತಾಪ ಕಳೆವದೀ ಚರಣ। ಉತ್ತಮಶ್ಲೋಕನ ತೋರಿಸಿ ಉತ್ತಮನ ಮಾಡುವದೀ ಚರಣ। ಕತ್ತಲೆ ಹರಿಸಿ ಆರ್ತಿಯಿಂದಲಿ ಸುಜ್ಞಾನ ಭಕುತಿ। ಇತ್ತು ಸುಖಬಡಿಸುವದೀ ಚರಣ। ಭೃತ್ಯರೆನಿಸಿದವರ ಸತತ ಪಾಲಿಸುವದೀ ಚರಣ। ಚ್ಯುತದೂರ ನಮ್ಮ ವಿಜಯವಿಠ್ಠಲನ ರ।ಜತಪೀಠದಲ್ಲಿ ಧ್ಯಾನಮಾಡುತಿಪ್ಪ ಮಧ್ವಮುನಿಯ ಮುದ್ದುಚರಣ ॥ 5 ॥

॥ ಜತೆ ॥ ಚಿತ್ತದಲ್ಲೀಚರಣ ಭಜಿಸಿದ ಜೀವಿಗೆ। ನಿತ್ಯಾಯು ಉತ್ಸಹ ವಿಜಯವಿಠ್ಠಲ ಕೊಡುವ ॥ 6 ॥

ಸಂಗ್ರಹ : ಯಲಮೇಲಿ ಪುಷ್ಪಹಾಸ ಬಾಲಕೃಷ್ಣ
ಬೆಂಗಳೂರು